**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ**

**ಎಸ್‌ಸಿ ಸಂಖ್ಯೆಃ 511/2021**

ಫಿರ್ಯಾದುದಾರರು : ಸರ್ಕಾರದ ಪರವಾಗಿ ಕೋಟಾ ಪೊಲೀಸರು

ವಿರುದ್ಧ

ಆರೋಪಿತರು : ಭಾಸ್ಕರ ಶೆಟ್ಟಿ ಮತ್ತು ಇನ್ನೊಬ್ಬರು

**ದೋಷಾರೋಪಣೆ**

ಶ್ರೀ ಅಬ್ದುಲ್ ರಹೀಮ್ ಹುಸೇನ್ ಶೇಖ್, ಬಿ.ಎಸ್‌ಸಿ., ಬಿ.ಇಡಿ., ಎಲ್‌ಎಲ್.ಬಿ. (ಸ್ಪೆಷಲ್), ಕುಂದಾಪುರ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶನಾದ ನಾನು

1. ಭಾಸ್ಕರ ಶೆಟ್ಟಿ
   ತಂದೆಃ ದಿ. ನಂದಯ್ಯ ಶೆಟ್ಟಿ
   ವಯಸ್ಸುಃ 70 ವರ್ಷ,
   ವಾಸಃ ಬೈಲು ಮನೆ, ಮೂಡುಬೆಟ್ಟು, ಉಳ್ತೂರು ಗ್ರಾಮ,
   ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ.

2. ರಾಕೇಶ್ ಶೆಟ್ಟಿ
   ತಂದೆಃ ಭಾಸ್ಕರ ಶೆಟ್ಟಿ
   ವಯಸ್ಸುಃ 40 ವರ್ಷ,
   ವಾಸಃ ಬೈಲು ಮನ, ಕೆದೂರು ಗ್ರಾಮ,
   ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ.

ನಿಮ್ಮ – ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ಉಡುಪಿ ಜಿಲ್ಲೆ, ಕುಂದಾಪುರ ತಾಲೂಕು, ಕೆದೂರು ಗ್ರಾಮದ ಮೂಡಬೆಟ್ಟು ಎಂಬಲ್ಲಿರುವ ಎ.ಪಿ. ಅಡಿಗ ರವರ ಮನೆ ಎದುರು ದಿನಾಂಕಃ20-11-2020 ರಂದು ಸಂಜೆ 4.30 ಗಂಟೆ ಸುಮಾರಿಗೆ ಚಾಸಾ.1 ಚಂದ್ರಶೇಖರ ಆಚಾರ್ಯರವರು, ಚಾಸಾ.7 ವಸಂತ ಶೆಟ್ಟಿ,

ಚಾಸಾ.8 ಶ್ರೀಮತಿ ಶೋಭಾ ಶೆಟ್ಟಿ, ಚಾಸಾ.9 ಆನಂದ ಶೆಟ್ಟಿ ಮತ್ತು ಚಾಸಾ.1 ಪ್ಲಂಬರ್ ಚಂದ್ರಶೇಖರ ಆಚಾರ್ಯ ರವರುಗಳು 1 ನೇ ಆರೋಪಿ ಭಾಸ್ಕರ ಶೆಟ್ಟಿಯಾದ ನಿಮ್ಮ ಮನೆಗೆ ಹೋಗುವ ಗೇಟ್ ಬಳಿಯ ಚರಂಡಿಯಲ್ಲಿ ಇದ್ದ ಸಿಮೆಂಟ್ ಮೋರಿ ಮುಖಾಂತರ ಪೈಪ್ ಲೈನ್ ಅಳವಡಿಸುತ್ತಿದ್ದಾಗ 2 ನೇ ಆರೋಪಿ ರಾಕೇಶ ಶೆಟ್ಟಿ ನೀನು ಅವರನ್ನು ಉದ್ದೇಶಿಸಿ "ಚರಂಡಿಯಲ್ಲಿ ಸಿಮೆಂಟು ಮೋರಿಯನ್ನು ನಾನು ಹಾಕಿದ್ದು, ಅದರಲ್ಲಿ ಪೈಪ್ ಲೈನ್ ಹಾಕಬೇಡಿ" ಎಂದು ಹೇಳಿ ಅಕ್ರಮವಾಗಿ ತಡೆದು ಕಲಂ 341 ಸಹಕಲಂ 34 ಭಾ.ದಂ.ಸಂ. ಅಡಿಯಲ್ಲಿ ಅಪರಾಧವೆಸಗಿರುತ್ತೀರಿ.

ಎರಡನೇದಾಗಿ ಮೇಲೆ ನಮೂದಿಸಿದ ದಿನಾಂಕ, ಸ್ಥಳ ಸಮಯದಲ್ಲಿ ಚಾಸಾ.1 ಚಂದ್ರಶೇಖರ ಆಚಾರ್ಯ, ಚಾಸಾ.7 ವಸಂತ ಶೆಟ್ಟಿ, ಚಾಸಾ.8 ಶ್ರೀಮತಿ ಶೋಭಾ ಶೆಟ್ಟಿ, ಚಾಸಾ.9 ಆನಂದ ಶೆಟ್ಟಿ ರವರು 1 ನೇ ಆರೋಪಿ ಭಾಸ್ಕರ ಶೆಟ್ಟಿಯಾದ ನಿಮ್ಮ ಮನೆಗೆ ಹೋಗುವ ಗೇಟ್ ಬಳಿಯ ಚರಂಡಿಯಲ್ಲಿ ಇದ್ದ ಸಿಮೆಂಟ್ ಮೋರಿ ಮುಖಾಂತರ ಪೈಪ್ ಲೈನ್ ಅಳವಡಿಸುತ್ತಿದ್ದಾಗ 2 ನೇ ಆರೋಪಿ ರಾಕೇಶ್ ಶೆಟ್ಟಿ ನೀನು ಬಂದು ತಡೆದಾಗ ಚಾಸಾ.7 ವಸಂತ ಶೆಟ್ಟಿ ರವರು ಕೆದೂರು ಪಂಚಾಯತ್‌ನಿಂದ ಅನುಮತಿ ಪಡೆದುಕೊಂಡಿರುವುದಾಗಿ ತಿಳಿಸಿದ್ದರೂ ಸಹಾ ನೀನು (2 ನೇ ಆರೋಪಿ) ಅವರನ್ನು ಉದ್ದೇಶಿಸಿ "ನಾನು ಹಾಕಿದ ಮೋರಿ ಇದು ಮೋರಿಯಲ್ಲಿ ಪೈಪ್ ಲೈನ್ ಹಾಕಬೇಡಿ ಪೈಪ್ ಒಡೆದು ಹಾಕುವುದಾಗಿ ಹೇಳಿ "ಬೇವರ್ಸಿ ರಂಡೆ ಮಕ್ಕಳಾ" ಎಂದು ಅವಾಚ್ಯ ಶಬ್ದಗಳಿಂದ ಬೈದುಕೊಂಡು ಕಾಲುದಾರಿ ಮುಖಾಂತರ ಮನೆ ಕಡೆಗೆ ಹೋಗಿ ನಂತರ ನೀನು (2 ನೇ ಆರೋಪಿ) ನಿನ್ನ ತಂದೆ 1 ನೇ ಆರೋಪಿ ಭಾಸ್ಕರ ಶೆಟ್ಟಿ ಯೊಂದಿಗೆ 1 ನೇ ಆರೋಪಿ ಭಾಸ್ಕರ ಶೆಟ್ಟಿ ರವರ ಸ್ಕೂಟಿ ನಂಬ್ರ ಕೆಎ-20-ಇಡಿ-9661 ರಲ್ಲಿ ಮತ್ತೆ ವಾಪಾಸು ಸ್ಥಳಕ್ಕೆ ಬಂದು ರಸ್ತೆ ಬದಿಯಲ್ಲಿ ಸ್ಕೂಟಿ ನಿಲ್ಲಿಸಿ ಸ್ಕೂಟಿಯ ಸೀಟ್ ಬಾಕ್ಸನಲ್ಲಿದ್ದ ಕತ್ತಿಯನ್ನು ತೆಗೆದುಕೊಂಡು ಬಂದು ಅವರನ್ನು ಪುನಃ ಉದ್ದೇಶಿಸಿ ಪೈಪ್ ತೆಗೆಯಿರಿ "ರಂಡೆ ಮಕ್ಕಳೆ ಸೂಳೆ ಮಕ್ಕಳೇ" ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನಪಡಿಸಿ ಸಾರ್ವಜನಿಕ

ಶಾಂತತೆಗೆ ಭಂಗ ತರಲು ಪ್ರಚೋದನೆ ನೀಡಿ ಕಲಂ 504 ಸಹಕಲಂ 34 ಭಾ.ದಂ.ಸಂ. ಅಡಿಯಲ್ಲಿ ಅಪರಾಧವೆಸಗಿರುತ್ತೀರಿ.

ಮೂರನೇದಾಗಿ ಮೇಲೆ ನಮೂದಿಸಿದ ದಿನಾಂಕ, ಸ್ಥಳ ಸಮಯದಲ್ಲಿ ಚಾಸಾ.1 ಚಂದ್ರಶೇಖರ ಆಚಾರ್ಯ, ಚಾಸಾ.7 ವಸಂತ ಶೆಟ್ಟಿ, ಚಾಸಾ.8 ಶ್ರೀಮತಿ ಶೋಭಾ ಶೆಟ್ಟಿ, ಚಾಸಾ.9 ಆನಂದ ಶೆಟ್ಟಿ ಇವರುಗಳು 1ನೇ ಆರೋಪಿ ಭಾಸ್ಕರ ಶೆಟ್ಟಿ ನಿಮ್ಮ ಮನೆಗೆ ಹೋಗುವ ಗೇಟ್ ಬಳಿ ಚರಂಡಿಯಲ್ಲಿ ಇದ್ದ ಸಿಮೆಂಟ್ ಮೋರಿ ಮುಖಾಂತರ ಪೈಪ್ ಲೈನ್ ಅಳವಡಿಸುತ್ತಿದ್ದಾಗ ನೀವಿಬ್ಬರು (ಆರೋಪಿತರು) ಸ್ಕೂಟಿ ನಂಬ್ರ ಕೆಎ-20-ಇಡಿ-9661 ರಲ್ಲಿ ಮತ್ತೆ ವಾಪಾಸು ಸ್ಥಳಕ್ಕೆ ಬಂದು ಅವರನ್ನು ಉದ್ದೇಶಿಸಿ ಪೈಪ್ ತೆಗೆಯಿರಿ ರಂಡೆ ಮಕ್ಕಳೇ ಸೂಳೇ ಮಕ್ಕಳೆ ಎಂದು ಬೈಯುತ್ತಾ ಪೈಪ್‌ನ್ನು ಕಡಿಯುವುದಾಗಿ ಹೇಳಿ ಜಗಳ ಮಾಡಿ ಎದುರಿನಲ್ಲಿದ್ದ ಚಾಸಾ.7 ವಸಂತ ಶೆಟ್ಟಿ ರವರನ್ನು ಉದ್ದೇಶಿಸಿ "ಬೇವರ್ಸಿ ರಂಡೆ ಮಗನೆ ನಿನ್ನನ್ನು ಕೊಂದೇ ಬಿಡುವುದಾಗಿ" ಬೊಬ್ಬೆ ಹಾಕಿ ಕೈಯಲ್ಲಿದ್ದ ಕತ್ತಿಯಿಂದ ಚಾಸಾ.7 ವಸಂತ ಶೆಟ್ಟಿ ರವರ ತಲೆಗೆ ಕಡಿದಿದ್ದಲ್ಲದೇ ಅವರ ಹೆಂಡತಿ ಚಾಸಾ.8ನೇ ಶೋಭಾ ಶೆಟ್ಟಿ ತಪ್ಪಿಸಲು ಹೋದಾಗ 1ನೇ ಆರೋಪಿ ಭಾಸ್ಕರ ಶೆಟ್ಟಿ ನೀನು ಚಾಸಾ.8 ಶೋಭಾ ಶೆಟ್ಟಿ ರವರನ್ನು ಕಡಿಯಲು ಬಂದಿದ್ದು, ಆಗ ಚಾಸಾ.7 ವಸಂತ ಶೆಟ್ಟಿ ರವರು ಅವರ ಎಡಕೈಯನ್ನು ಅಡ್ಡಗಟ್ಟಿದ್ದರೂ ಸಹಾ 1ನೇ ಆರೋಪಿ ಭಾಸ್ಕರ ಶೆಟ್ಟಿ ನೀನು ಬೀಸಿದ ಕತ್ತಿ ಚಾಸಾ.8 ಶೋಭಾ ಶೆಟ್ಟಿ ರವರ ಕುತ್ತಿಗೆಯ (ಮ್ಯಾಳಿಯ) ಎಡಬದಿಗೆ ತಾಗಿದ್ದು 1ನೇ ಆರೋಪಿ ಭಾಸ್ಕರ ಶೆಟ್ಟಿ ನೀನು ಚಾಸಾ.7 ವಸಂತ ಶೆಟ್ಟಿ ಮತ್ತು ಅವರ ಹೆಂಡತಿ ಚಾಸಾ.8 ಶೋಭಾ ಶೆಟ್ಟಿ ರವರನ್ನು ಕೊಲೆ ಮಾಡುವ ಉದ್ದೇಶದಿಂದ ಕತ್ತಿಯಿಂದ ಅವರುಗಳ ತಲೆಗೆ ಮತ್ತು ಕುತ್ತಿಗೆಗೆ ಹೊಡೆದು ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿ ಕೊಲ್ಲಲು ಪ್ರಯತ್ನಿಸಿ ಕಲಂ 307 ಸಹಕಲಂ 34 ಭಾ.ದಂ.ಸಂ. ಅಡಿಯಲ್ಲಿ ಅಪರಾಧವೆಸಗಿರುತ್ತೀರಿ.

ನಾಲ್ಕನೇದಾಗಿ ಮೇಲೆ ನಮೂದಿಸಿದ ದಿನಾಂಕ, ಸ್ಥಳ ಸಮಯದಲ್ಲಿ ಚಾಸಾ.1 ಚಂದ್ರಶೇಖರ ಆಚಾರ್ಯ, ಚಾಸಾ.7 ವಸಂತ ಶೆಟ್ಟಿ, ಚಾಸಾ.8 ಶ್ರೀಮತಿ ಶೋಭಾ ಶೆಟ್ಟಿ, ಚಾಸಾ.9 ಆನಂದ ಶೆಟ್ಟಿ ಇವರುಗಳು 1ನೇ ಆರೋಪಿ ಭಾಸ್ಕರ ಶೆಟ್ಟಿ ನಿಮ್ಮ ಮನೆಗೆ ಹೋಗುವ ಗೇಟ್ ಬಳಿ ಚರಂಡಿಯಲ್ಲಿ ಇದ್ದ ಸಿಮೆಂಟ್ ಮೋರಿ ಮುಖಾಂತರ ಪೈಪ್ ಲೈನ್ ಅಳವಡಿಸುತ್ತಿದ್ದಾಗ ಅವರನ್ನು ಉದ್ದೇಶಿಸಿ "ಬೇವರ್ಸಿ ರಂಡೆ ಮಗನೆ ನಿನ್ನನ್ನು ಕೊಂದೇ ಬಿಡುವುದಾಗಿ" ಬೊಬ್ಬೆ ಹಾಕಿದಾಗ ಚಾಸಾ.7 ವಸಂತ ಶೆಟ್ಟಿ ರವರ ಹೆಂಡತಿ ಚಾಸಾ.8 ಶೋಭಾ ಶೆಟ್ಟಿ ರವರು ಅಲ್ಲೇ ಇದ್ದು ತನ್ನ ಗಂಡ ಚಾಸಾ.7 ವಸಂತ ಶೆಟ್ಟಿ ರವರಿಗೆ ನೀವಿಬ್ಬರು (ಆರೋಪಿತರು) ಕತ್ತಿಯಿಂದ ಹೊಡೆಯಲು ಮುಂದಾದಾಗ ಅದನ್ನು ಬಿಡಿಸಲು ಬಂದಾಗ ಅವಳ ಮೈ ಮುಟ್ಟಿ ದೂಡಿ ಮಾನಭಂಗ ಮಾಡಿದ್ದಲ್ಲದೇ ಅವಳಿಗೆ ಹಲ್ಲೆ ಮಾಡಿ ಕಲಂ 354 ಸಹ ಕಲಂ 34 ಭಾ.ದಂ.ಸಂ. ಅಡಿಯಲ್ಲಿ ಅಪರಾಧವೆಸಗಿರುತ್ತೀರಿ.

ಕೊನೆದಾಗಿ ಮೇಲೆ ನಮೂದಿಸಿದ ದಿನಾಂಕ, ಸ್ಥಳ ಸಮಯದಲ್ಲಿ ಚಾಸಾ.1 ಚಂದ್ರಶೇಖರ ಆಚಾರ್ಯ, ಚಾಸಾ.7 ವಸಂತ ಶೆಟ್ಟಿ, ಚಾಸಾ.8 ಶ್ರೀಮತಿ ಶೋಭಾ ಶೆಟ್ಟಿ, ಚಾಸಾ.9 ಆನಂದ ಶೆಟ್ಟಿ ಇವರುಗಳು 1ನೇ ಆರೋಪಿ ಭಾಸ್ಕರ ಶೆಟ್ಟಿ ನಿಮ್ಮ ಮನೆಗೆ ಹೋಗುವ ಗೇಟ್ ಬಳಿ ಚರಂಡಿಯಲ್ಲಿ ಇದ್ದ ಸಿಮೆಂಟ್ ಮೋರಿ ಮುಖಾಂತರ ಪೈಪ್ ಲೈನ್ ಅಳವಡಿಸುತ್ತಿದ್ದಾಗ ಅವರನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದು ಬೊಬ್ಬೆ ಹಾಕಿ ಕೈಯಲ್ಲಿದ್ದ ಕತ್ತಿಯಿಂದ ಚಾಸಾ.7 ವಸಂತ ಶೆಟ್ಟಿ ರವರ ತಲೆಗೆ ಕಡಿದು, ಆ ನಂತರ 1ನೇ ಆರೋಪಿ ಭಾಸ್ಕರ ಶೆಟ್ಟಿ ನೀನು ಪುನಃ ಚಾಸಾ.7 ವಸಂತ ಶೆಟ್ಟಿ ರವರನ್ನು ಕಡಿಯಲು ಬಂದಿದ್ದು ಆಗ ಚಾಸಾ.7 ವಸಂತ ಶೆಟ್ಟಿ ರವರು ಅವರ ಬಲಗೈಯನ್ನು ಅಡ್ಡ ಕೊಟ್ಟಿದ್ದು ಆಗ ಚಾಸಾ.1 ಚಂದ್ರಶೇಖರ ಆಚಾರ್ಯ ರವರು ಅವರ ಬಲಕೈಯಿಂದ 1ನೇ ಆರೋಪಿ ಭಾಸ್ಕರ ಶೆಟ್ಟಿ ನೀನು ಹಿಡಿದುಕೊಂಡಿದ್ದ ಕತ್ತಿಯ ಹಿಡಿಯನ್ನು ಹಿಡಿದ ಪರಿಣಾಮ ಚಾಸಾ.7 ವಸಂತ ಶೆಟ್ಟಿ ರವರ ಬಲಗೈ ಹಸ್ತಕ್ಕೆ ಹಾಗೂ ಚಾಸಾ.1 ಚಂದ್ರಶೇಖರ ಆಚಾರ್ಯ ರವರ ಬಲಕೈ ಹಸ್ತಕ್ಕೆ ರಕ್ತಗಾಯವಾಗಿದ್ದು, ಅಷ್ಟರಲ್ಲಿ ಚಾಸಾ,1 ಚಂದ್ರಶೇಖರ ಆಚಾರ್ಯ ರವರು 1ನೇ ಆರೋಪಿ ಭಾಸ್ಕರ ಶೆಟ್ಟಿ ನಿಮ್ಮನ್ನು ಹಿಂದಕ್ಕೆ ಎಳೆದುಕೊಂಡು ಹಿಂದಿನಿಂದ ಗಟ್ಟಿಯಾಗಿ

ಹಿಡಿದುಕೊಂಡಿದ್ದು, 1ನೇ ಆರೋಪಿ ಭಾಸ್ಕರ ಶೆಟ್ಟಿ ನೀನು ಚಾಸಾ.1 ಚಂದ್ರಶೇಖರ ಆಚಾರ್ಯ ರವರ ಎಡಕೈ ಹೆಬ್ಬೆರಳನ್ನು ಕಚ್ಚಿದ್ದು, ಆ ನಂತರ 2ನೇ ಆರೋಪಿ ರಾಕೇಶ್ ಶೆಟ್ಟಿ ನೀನು ಮರದ ದೊಣ್ಣೆಯಿಂದ ಹಿಂದಿನಿಂದ ಚಾಸಾ,1 ಚಂದ್ರಶೇಖರ ಆಚಾರ್ಯ ರವರ ಬೆನ್ನಿಗೆ ಹೊಡೆದಾಗ ಅವರು ನೆಲಕ್ಕೆ ಬಿದ್ದು ಅವರ ಎಡಕಾಲ ಮೊಣಗಂಟಿಗೆ ರಕ್ತಗಾಯವಾಗಿದ್ದು, ಆ ನಂತರ 2ನೇ ಆರೋಪಿ ರಾಕೇಶ್ ಶೆಟ್ಟಿ ನೀನು ಚಾಸಾ,1 ಚಂದ್ರಶೇಖರ ಆಚಾರ್ಯ ರವರ ತಮ್ಮ ಚಾಸಾ.6 ಜಯಪ್ರಕಾಶ್ ಶೆಟ್ಟಿ ರವರಿಗೆ ದೊಣ್ಣೆಯಿಂದ ಹೊಡೆದು ಸ್ವಇಚ್ಛೆಯಿಂದ ಸಾಮಾನ್ಯ ಸ್ವರೂಪದ ನೋವು ಉಂಟು ಮಾಡಿ, ಕಲಂ 324 ಸಹ ಕಲಂ 34 ಭಾ.ದಂ.ಸಂ. ಅಡಿಯಲ್ಲಿ ಅಪರಾಧವೆಸಗಿರುತ್ತೀರಿ.

ಮೇಲಿನ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಬರುವುದರಿಂದ ಈ ಕುರಿತು ನಿನ್ನನ್ನು ವಿಚಾರಣೆಗೆ ಒಳಪಡಿಸಲು ಆದೇಶಿಸುತ್ತೇನೆ.

ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾಗಿ ಅವರ ಉತ್ತರವನ್ನು ದೃಢೀಕರಿಸಲಾಗಿದೆ.

**ದಿನಾಂಕಃ02-07-2024**

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಕುಂದಾಪುರ.**

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ**

**ಎಸ್‌ಸಿ ಸಂಖ್ಯೆಃ 511/2021**

**ಫಿರ್ಯಾದುದಾರರು** : ಸರ್ಕಾರದ ಪರವಾಗಿ ಕೋಟಾ ಪೊಲೀಸರು

**ವಿರುದ್ಧ**

**ಆರೋಪಿ** : **1** ಭಾಸ್ಕರ ಶೆಟ್ಟಿ
ತಂದೆಃ ದಿ. ನಂದಯ್ಯ ಶೆಟ್ಟಿ
ವಯಸ್ಸುಃ **70** ವರ್ಷ,
ವಾಸಃ ಬೈಲು ಮನೆ, ಮೂಡುಬೆಟ್ಟು, ಉಳ್ತೂರು ಗ್ರಾಮ,
ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ.

**ಆರೋಪಿಯ ಹೇಳಿಕೆ**

**ಪ್ರಶ್ನೆ 1.** ಈಗ ನಿಮಗೆ ಓದಿ ಹೇಳಿದ ಆರೋಪವನ್ನು ಕೇಳಿದ್ದೀರಾ?

ಉತ್ತರಃ **Yes**

ಪ್ರಶ್ನೆ **2.** ನಿಮ್ಮ ವಿರುದ್ಧ ಆರೋಪಿಸಲಾದ ಆರೋಪವನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಆರೋಪ ವಿಚಾರಣೆ ಮಾಡಬೇಕೆಂದು ಹೇಳುತ್ತೀರಾ?

ಉತ್ತರಃ **Claimed to be tried.**

ದಿನಾಂಕಃ**02-07-2024**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕುಂದಾಪುರ

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ**

**ಎಸ್‌ಸಿ ಸಂಖ್ಯೆಃ 511/2021**

**ಫಿರ್ಯಾದುದಾರರು** ಃ ಸರ್ಕಾರದ ಪರವಾಗಿ ಕೋಟಾ ಪೊಲೀಸರು

**ವಿರುದ್ಧ**

**ಆರೋಪಿ** ಃ **2.** ರಾಕೇಶ್ ಶೆಟ್ಟಿ
ತಂದೆಃ ಭಾಸ್ಕರ ಶೆಟ್ಟಿ
ವಯಸ್ಸುಃ **40** ವರ್ಷ,
ವಾಸಃ ಬೈಲು ಮನ, ಕೆದೂರು ಗ್ರಾಮ,
ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ.

**ಆರೋಪಿಯ ಹೇಳಿಕೆ**

**ಪ್ರಶ್ನೆ 1.** ಈಗ ನಿಮಗೆ ಓದಿ ಹೇಳಿದ ಆರೋಪವನ್ನು ಕೇಳಿದ್ದೀರಾ?

ಉತ್ತರಃ **Yes.**

ಪ್ರಶ್ನೆ **2.** ನಿಮ್ಮ ವಿರುದ್ಧ ಆರೋಪಿಸಲಾದ ಆರೋಪವನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಆರೋಪ ವಿಚಾರಣೆ ಮಾಡಬೇಕೆಂದು ಹೇಳುತ್ತೀರಾ?

ಉತ್ತರಃ **Claimed to be tried.**

ದಿನಾಂಕಃ **02-07-2024**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕುಂದಾಪುರ